**ದಿನಾಂಕ 02.06.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ದಾವಾ ಆಸ್ತಿಯಲ್ಲಿ 30*20 ಅಗಲದ ಒಂದು ನೀರಿನ ಬಾವಿ ಇದೆ ಎಂದರೆ ಸರಿಯಲ್ಲ. ಸದರಿ ಬಾವಿಯಲ್ಲಿ ಮಳೆಗಾಲದಲ್ಲಿ ಯಾವಾಗಲೂ ನೀರು ತುಂಬಿರುತ್ತದೆ ಎಂದರೆ ಸರಿಯಲ್ಲ, ಅಲ್ಲಿ ಬಾವಿಯೇ ಇಲ್ಲ. ಶಿರಾದಲ್ಲಿ ಬಾವಿ ಮತ್ತು ಬೋರ್ ವೆಲ್ ನೀರನ್ನು ಹೊರತುಪಡಿಸಿದರೆ ಬೇರೆ ನೀರಿನ ವ್ಯವಸ್ಥೆಯೇ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಕೋಡಿಮಲ್ಲಯ್ಯ, ಅವರ ಮಗ ಸೋಮಶೇಖರ ಮತ್ತು ಇತರೇ ಸಾಕ್ಷಿಗಳು ಎಲ್ಲರೂ ಸೇರಿ ವಾದಿಯ ಹೆಸರಿನಲ್ಲಿ ಡಿ.ಡಿ. ತೆಗೆದು ಅವರ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಕರಾರು ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕೋಡಿಮಲ್ಲಯ್ಯನವರಿಗೆ ಸದರಿಯ ಸ್ವತ್ತು ಸ್ವಯಾರ್ಜಿತ ಎಂದು ನಾನು ನೋಡಿಯೇ ಕರಾರು ಪತ್ರ ಮಾಡಿಕೊಂಡಿದ್ದೇವೆ ಯಾವ ದಾಖಲಾತಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಕಮಲ್ ಪಾಷ ರವರು ಲೀಗಲ್ ನೋಟಿಸ್ ನ್ನು ತೆಗೆದುಕೊಂಡಿದ್ದು, ಅವರು ವಕೀಲರಾದ ಕಾರಣ ವ್ಯವಹಾರ ಮುಂದುವರೆಸಿದ್ದು ಪತ್ರವನ್ನು ನಾನು ನೋಡಿಲ್ಲ.
2. ಜಂಟಿ ಕುಟುಂಬದ ಆಸ್ತಿಯನ್ನು ಕಬಳಿಸಬೇಕೆಂದು ಎಲ್ಲರೂ ಸೇರಿ ಸುಳ್ಳು ಕರಾರು ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.5 ರ ದಾಖಲಾತಿಯು ಪ್ರತಿವಾದಿಗಳಿಗೆ ನಾವು ಕೊಟ್ಟಿರುವುದು ತಲುಪಿದೆ ಎನ್ನುವದಕ್ಕೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಯಾವುದೇ ನೊಟೀಸ್ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನಿ.ಪಿ.1, 4 ಮತ್ತು 5 ರ ದಾಖಲಾತಿಗಳನ್ನು ನಾನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಸ್ರೀಂ ಕಮಲ್ ರವರು ನ್ಯಾಯಾಲಯಕ್ಕೆ ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂದು ಅವರ ಪರ ಜಿ.ಪಿ.ಎ. ಪಡೆದುಕೊಂಡು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**